ಕರ್ನಾಟಕ ವಿಧಾನಸಭೆ

ಮಂಗಳವಾರ 22ನೇ ಜನವರಿ 2002 ಸದನವು ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ ಶ್ರೀ ಎಂ.ವಿ.ವೆಂಕಟಪ್ಪ ಅವರು ಪೀಠದಲ್ಲಿ ಉಪಸ್ಥಿತರಿದ್ದರು.

1) ಮಾನ್ಯ ಸದಸ್ಯರುಗಳಿಗೆ ಅಧ್ಯಕ್ಷರಿಂದ ಹೊಸವರ್ಷದ ಶುಭಾಶಯಗಳು

ಅಧ್ಯಕ್ಷರು : ಮಾನ್ಯ ಸದಸ್ಯರೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು, ಎಲ್ಲಾ ಸದಸ್ಯರುಗಳು ಅವರವರ ಕ್ಷೇತ್ರಗಳಲ್ಲಿ ಚೆನ್ನಾಗಿ ಹೆಚ್ಚು ಹೆಚ್ಚಾಗಿ ಕೆಲಸಗಳನ್ನು ಮಾಡಿ ಮತದಾರರ ಆಶೋತ್ತರಗಳನ್ನು ಈಡೇರಿಸಬೇಕು. ಅದಕ್ಕೆ ಸರ್ಕಾರವೂ ಸಹಕಾರ ಕೊಡಬೇಕೆಂಬುದು ನನ್ನ ಕೋರಿಕೆಯಾಗಿದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಅದಕ್ಕೆ ನಮಗೂ ಮಾತನಾಡಲು ಸಾಕಷ್ಟು ಕಾಲಾವಕಾಶವನ್ನು ಕೊಡಬೇಕು, ಅದರಲ್ಲೂ ನಮ್ಮ ಕಡೆ ನೋಡಿಕೊಂಡು ಕೊಡಬೇಕು.

ಅಧ್ಯಕ್ಷರು : ನಾನು ಅದನ್ನು ನೋಡಿಕೊಂಡು ಕೊಡುತ್ತಿದ್ದೇನೆ, ಅದರಲ್ಲಿ ನಾನು ಯಾವತ್ತೂ ಡಿಸ್‌ಕ್ರಿಮಿನೇಟ್ ಮಾಡಿಲ್ಲವಲ್ಲಾ?

2) ನಿಲುವಳಿ ಸೂಚನೆ ಮಂಡನೆಗೆ ಒತ್ತಾಯ

ವಿಷಯ : ರಾಜ್ಯದಲ್ಲಿ ನಡೆದಿರುವ ನಕಲಿ ಸ್ಟ್ಯಾಂಪ್ ಪೇಪರ್ ಹಗರಣ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಸಭಾಧ್ಯಕ್ಷರೇ, ಇವತ್ತು ರಾಜ್ಯದಲ್ಲಿ ಒಂದು ಪ್ರಮುಖವಾದಂತಹ ಹಗರಣ ಹೊರ ಬಂದಿದೆ. ಅದು ನಕಲಿ ಸ್ಟ್ಯಾಂಪ್ ಪೇಪರ್ ಹಗರಣ. ಇದು 10 ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ನಕಲಿ ಛಾಪಾ ಕಾಗದ ಮಾರಾಟವಾಗಿರುವಂಥಾದ್ದು. ಈ ವಿಚಾರವನ್ನು ನಿಲುವಳಿ ಸೂಚನೆಯ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿದ್ದೇವೆ. ಅದಕ್ಕೆ ದಯಮಾಡಿ ಪ್ರಸ್ತಾಪ ಮಾಡಲು ಅವಕಾಶ ಕೊಡಬೇಕು. ಇದು ದೊಡ್ಡ ಹಗರಣ, ಇವತ್ತು ಇಡೀ ರಾಜ್ಯದಲ್ಲಿ ಆರ್ಥಿಕ ಭಯೋತ್ಪಾದನೆ ನಡೆಯುತ್ತಿದೆ.